ಶ್ರೀ ವೀರೇಂದ್ರ ಪಾಟೀಲ್.—ಯಾವನೋ ಒಬ್ಬ ರೈತ ತನ್ನ ಹೊಲದಲ್ಲಿ ಬಾವಿ ತೋಡಿಸುತ್ತಿದ್ದ. ಅದರಲ್ಲಿ 14 ಜನ ಕೆಲಸ ಮಾಡುತ್ತಾ ಇದ್ದರು. ಇದ್ದಕ್ಕಿದ್ದ ಹಾಗೆ ಮಣ್ಣು ಸ್ಲಿಪ್ ಆಗಿ ಅವರ ಮೈಮೇಲೆ ಬಿದ್ದು 6 ಮಂದಿ ಮೃತಪಟ್ಟು 4 ಮಂದಿ ಗಾಯಗೊಂಡರು.

ಶ್ರೀ ಎಂ. ನಾಗಪ್ಪ.—ಮೃತಪಟ್ಟವರ ಕುಟುಂಬಗಳಿಗೆ 530 ರೂಪಾಯಿಗಳು ಹಾಗೂ ಎರಡೂವರೆ ಮೂಟೆಗಳಷ್ಟು ಆಹಾರ ಧಾನ್ಯಗಳನ್ನು ರೆವಿನ್ಯೂ ಅಧಿಕಾರಿಗಳು ಹಂಚಿರುವುದು ನಿಜವೇ? ಇದು ಒಬ್ಬ ಮನುಷ್ಯನ ಜೀವನದ ಬೆಲೆ 530 ರೂಪಾಯಿ ಕಟ್ಟಿದ ಹಾಗೆ ಇದೆ! ಆದುದರಿಂದ ಇದಕ್ಕೆ ಸರಿಯಾದಂಥ ಕಾಂಪನ್ಸೇಷನ್ ಕೊಟ್ಟಿದ್ದೀರಾ? ನಿಯಮಗಳಲ್ಲಿ ಅದಕ್ಕೆ ಅವಕಾಶ ಇಲ್ಲದೇ ಹೋದರೆ ರೂಲ್ಸನ್ನು ತಿದ್ದುಪಡಿ ಮಾಡಲಿಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಯಾವನೋ ಒಬ್ಬ ರೈತ ತನ್ನ ಹೊಲದಲ್ಲಿ ಬಾವಿ ತೋಡಿಸಲು ಕೂಲಿಗಾರರನ್ನು ಇಟ್ಟುಕೊಂಡು ಕೆಲಸ ಮಾಡಿಸುತ್ತಾ ಇದ್ದ. ಹಾಗೆ ಮಾಡುತ್ತಾ ಇರುವಾಗ ಅವರ ಮೈಮೇಲೆ ಮಣ್ಣು ಸ್ಲಿಪ್ ಆಗಿ ಮೃತಪಟ್ಟವರಿಗೆ ಅಲ್ಲಿಯ ಅಧಿಕಾರಿಗಳೇ ಸ್ಥಾನೀಕವಾಗಿ ಕೆಲವು ಜನರಿಂದ 530 ರೂಪಾಯಿಗಳನ್ನು ಹಾಗೂ 2½ ಮೂಟೆಯಷ್ಟು ಆಹಾರಧಾನ್ಯಗಳನ್ನೂ ಕರೆಕ್ಟ್ ಮಾಡಿ ಹಂಚಿರುತ್ತಾರೆ. ಅಷ್ಟೇ ಹೊರತು ಇನ್ನು ಏನೂ ಇಲ್ಲ.

ಶ್ರೀ ಇ.ಪುಂಡಲೀಕಪ್ಪ.—ಸ್ವಾಮಿ, ಹಿಂದುಳಿದ ಜಾತಿಗಳಲ್ಲಿ ಬಹಳವಾಗಿ ಹಿಂದುಳಿದ ವಾಲ್ಮೀಕಿ ಜಾತಿಯವರೂ ಇರುವುದರಿಂದ, ಸರ್ಕಾರದವರು ತಮ್ಮ ಸಹಾನುಭೂತಿ ತೋರಿಸಿ ಇನ್ನೂ ಅವರಿಗೆ ಸಹಾಯ ಮಾಡಲು ಮನಸ್ಸು ಮಾಡುತ್ತಾರೆಯೇ?

ಶ್ರೀ ವೀರೇಂದ್ರ ಪಾಟೀಲ್.—ಬಹುಶಃ ಸರ್ಕಾರ ಸಹಾಯ ಮಾಡಬೇಕೆಂದು ಇಲ್ಲಿಯವರೆಗೂ ಕೇಳಿಲ್ಲ. ಅಲ್ಲಿಯ ಜನರು ಕಷ್ಟ ನೋಡಿಕೊಂಡು, ದುಡ್ಡು ಕರೆಕ್ಟ್ ಮಾಡಿ ಧಾನ್ಯ ಕರೆಕ್ಟ್ ಮಾಡಿ ಹಂಚಿದ್ದಾರೆ. ಬಹುಶಃ ಸರ್ಕಾರದವರು ಸಹಾಯ ಮಾಡಬೇಕೆಂದಿದ್ದರೆ, ರೂಲ್ಸ್ ಪರ್ಮಿಟ್ ಮಾಡಿದರೆ, ಆ ರೀತಿ ಅಲ್ಲಿಂದ ವರದಿ ಬಂದರೆ ಅದನ್ನು ಪರಿಶೀಲನೆ ಮಾಡುತ್ತೇವೆ.

Development of Ports in the State—Indo-Pol Consultants

3. Sri H. N. NANJE GOWDA (Arkalgud).—

Will the Minister of State for Fisheries and Ports be pleased to state :—

(*a*) whether discussions were held at Bangalore on 12th August 1968 between the Indo-Pol consultants and officers of the State Government to find out the possibilities of developing ' ports ' in the State by entering into a ' Barter deal ' with Poland ;

(*b*) whether any report has been submitted to the State Government by the Indo-Pol consultants on the said matter ;

(*c*) whether the State Government have submitted any draft agreement in the matter to the Union Government for approval ;

(*d*) the names of the ports that are to be developed under the said deal and the probable cost on each one of these ports ?

A.—Sri H. C. LINGA REDDY (Minister of State for Fisheries and Ports).—

(*a*) Yes.

(*b*) No.

(*c*) No.

(SRI H. C. LINGA REDDY)

(*d*) The Ports intended to be developed are Karwar, Tadri, Honavar, Coondapur, Malpe and Mangalore. Feasibility Report is yet to be received and detailed costs are then to be worked out.

Sri H. N. NANJE GOWDA.—What was the recommendation made by the Indo-Pol board ?

† H. C. LINGA REDDY.—Discussions were held in accordance with agreement that had been reached between the Polish representatives and the representatives of the Mysore Government and they were of an exploratory nature.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸ್ವಾಮಿ, ಮಲ್ಪೆ ಪಾನುಗಾರಿಕೆ ಬಂದರು ಅಭಿವೃದ್ಧಿ ಯಾಗುತ್ತದೆಂದು ಸಾಧಾರಣ 5 ವರ್ಷದಿಂದ ಹೇಳುತ್ತಿದ್ದಾರೆ. ಈಗ ಆದರ ಪರಿಸ್ಥಿತಿ ಏನಿದೆ ? ಮಾನ್ಯ ಮಂತ್ರಿಯವರು ಮೂರು ಕೋಟಿ ರೂಪಾಯಿಯ ವೆಚ್ಚದಿಂದ ಬಂದರು ಅಭಿವೃದ್ಧಿಯಾಗುತ್ತದೆಂದು ಹೇಳಿದುದನ್ನು ಪೇಪರಿನಲ್ಲಿ ನೋಡಿದ ಹಾಗೆ ಇದೆ. ಆದ್ದರಿಂದ, ಇದಕ್ಕೆ ಯಾರು ಹಣವನ್ನು ವ್ಯಯಮಾಡುತ್ತಾರೆ ಮತ್ತು, ಇದರ ಪರಿಸ್ಥಿತಿ ಹೇಗೆ ಇದೆ ?

ಶ್ರೀ ಎಚ್. ಸಿ ಲಿಂಗಾರೆಡ್ಡಿ.—ಮಲ್ಪೆ ಬಂದರವನ್ನು ಪಾನಿನ ಬಂದರವನ್ನಾಗಿ ಅಭಿವೃದ್ಧಿ ಪಡಿಸಬೇಕೆಂದು ಯುಗೊಸ್ಲಾವಿಯಾದ ಒಂದು ಫರ್ಮ್ ಕೊಟ್ಟಿರತಕ್ಕ ವರದಿಯನ್ನು ತತ್ವಶಃ ಒಪ್ಪಿಕೊಂಡಿದ್ದೇವೆ, ಆದನ್ನು ಕಾರ್ಯಗತ ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಚ್. ಎನ್. ನಂಜೇಗೌಡ.—ಮಲ್ಪೆ ಅಭಿವೃದ್ಧಿಗೆ ಯುಗೊಸ್ಲಾವಿಯಾದ ರಿಪೋರ್ಟ್ ಪ್ರಕಾರ ಎಷ್ಟು ರೂಪಾಯಿಯಾಗುತ್ತದೆ, ಇಂಡೋಪೋಲ್ ಫೀಸಿಬಿಲಿಟಿ ರಿಪೋರ್ಟು ಪ್ರಕಾರ ಎಷ್ಟು ಖರ್ಚಾಗುತ್ತದೆಂದು ಹೇಳುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಯುಗೊಸ್ಲಾವಿಯಾದವರು ಮಲ್ಪೆಗೆ ಕೊಟ್ಟಿರುವ ವರದಿ ಪ್ರಕಾರ 9.37 ಕೋಟಿ ಪಾನಿನ ಅಭಿವೃದ್ಧಿ ಬಂದರಿಗೆ ಖರ್ಚಾಗುತ್ತದೆಂದು ಹೇಳಿದ್ದಾರೆ. ಇಂಡೋಪೋಲ್ ಅವರು ಈ ವಿಚಾರದಲ್ಲಿ ಆಖೈರಾದ ವರದಿ ಕೊಟ್ಟಿಲ್ಲ.

Sri R. NAGAN GOUDA.—This is said to be a "Barter deal" in exchange for the technical help and technical machinery that Poland proposes to give. What is the material that we are going to give in exchange under this barter deal ?

ಶ್ರೀ ಎಚ್. ಸಿ. ಲಿಂಗಾರಡ್ಡಿ.—ಪೋಲಷ್ ಫರ್ಮ್‌ನವರು ಐರನ್‌ಓರ್, ಫಿಶರಿ, ಟಿಂಬರ್, ಕಾಫಿ, ಜ್ಯೂಟ್, ಟೀ ಮುಂತಾದುವುಗಳನ್ನು ಮೈಸೂರು ಸಂಸ್ಥಾನದಿಂದ ತೆಗೆದುಕೊಳ್ಳಲು ಸಿದ್ಧವಾಗಿದ್ದಾರೆ ಎಂದು ಹೇಳಿದ್ದಾರೆ.

ಶ್ರೀ ಡಿ. ಎಸ್. ನಾಡಕರ್ಣಿ.—ನಾವು ಕಾರವಾರ, ಹೊನ್ನಾವರ ಎಂದು ಹೆಸರು ಮಾತ್ರ ಹೇಳುತ್ತಿದ್ದೇವೆ. ಇದನ್ನು ಇಂಡೋ-ನಾರ್ವೆಜಿಯನ್ ಸ್ಕೀಮಿನೊಳಗೆ ಈಗಲಾದರೂ ಸೇರಿಸುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಕಾರವಾರ ಮತ್ತು ಹೊನ್ನಾವರ ಇಂಡೋಪೋಲ್‌ನವರ ಪರಿಶೀಲನೆಯಲ್ಲಿದೆ. ಕಾರವಾರ ಕಾರ್ಗೋ ಮತ್ತು ಫಿಶಿಂಗ್ ಹಾರ್ಬರ್ ಆಗಿಯೂ, ಹೊನ್ನಾವರವನ್ನು ಫಿಶಿಂಗ್ ಹಾರ್ಬರ್ ಆಗಿ, ಪರಿವರ್ತನೆ ಮಾಡಬೇಕೆಂದು ಇದೆ. ಇವುಗಳ ಖರ್ಚು, ಇವರು ಪರಿಶೀಲನೆ ಮಾಡಿ ವರದಿ ತಿಂಗಳ ಆಖೈರೊಳಗೆ ಕೊಡುವಾಗ ತಿಳಿಯುತ್ತದೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಈ ಮಲ್ಪೆ ಬಂದರವನ್ನು 9.37 ಕೋಟಿ ವೆಚ್ಚದಲ್ಲಿ ತಾವು ತೆಗೆದು ಕೊಳ್ಳುತ್ತೀರಿ ಎಂದು ಹೇಳಿದ್ದೀರಿ. ಇದಕ್ಕೆ ಯುಗೊಸ್ಲಾವಿಯದವರು ಎಷ್ಟು ಹಣವನ್ನು ಕೊಡುತ್ತಾರೆ, ನಮ್ಮ ಸರ್ಕಾರದವರು ಪಾಲು ಎಷ್ಟು, ಮತ್ತು ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮುಲ್ಕೆ ಬಂದರಿಗೆ ಸಂಬಂಧಪಟ್ಟ ಯುಗೊಸ್ಲಾವಿಯಾದವರು ಕೊಟ್ಟಿರತಕ್ಕಂತಹ ವರದಿ ಪ್ರಕಾರ ತತ್ವಶಃ ಇಂಡಿಯಾ ಸರ್ಕಾರದವರು ಮತ್ತು ಮೈಸೂರು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಇಂಡಿಯಾ ಸರ್ಕಾರದವರು 3.7 ಕೋಟಿ ರೂಪಾಯಿ ಸಂಬಂಧವಾದ ವೆಚ್ಚದ ಫಿಶರೀಸ್ ಹಾರ್ಬರ್ ಕಟ್ಟುವ ವಿಷಯವನ್ನು ಪರಿಶೀಲಿಸುತ್ತಿದ್ದಾರೆ. ಇದಕ್ಕೆ ಸಂಬಂಧಪಟ್ಟ ಮಾಹಿತಿಗಳನ್ನು ಸಂಸ್ಥಾನದಿಂದ ಕಳಿಸಿ ಎಂದು ಹೇಳಿದ್ದಾರೆ. ಯುಗೊಸ್ಲಾವಿಯದವರು ಎಕ್ಸ್‌ಪ್‌ಮೆಂಟ್ ಕ್ರೆಡಿಟ್; ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ಈ ವಿಚಾರದಲ್ಲಿ ಸಂಸ್ಥಾನದಿಂದ ಕೇಂದ್ರ ಸರ್ಕಾರದೊಡನೆ ಪತ್ರ ವ್ಯವಹಾರ ನಡೆಯುತ್ತಿದೆ.

ಶ್ರೀ ಎಚ್. ಎನ್. ನಂಜೇಗೌಡ.—ಈ ಆರು ಬಂದರುಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಅಂದಾಜು ವೆಚ್ಚ ಎಷ್ಟಾಗಬಹುದು ಎಂದು ಊಹೆ ಮಾಡಿದ್ದೀರಿ? 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ದುಡ್ಡನ್ನು ಒದಗಿಸುವುದಕ್ಕೆ ಏರ್ಪಾಡುಮಾಡುತ್ತೀರಿ? ಈ ವರ್ಷದಲ್ಲಿ ಎಷ್ಟು ಹಣ ಖರ್ಚುಮಾಡುವುದಕ್ಕೆ ಅನುಕೂಲವಿದೆ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಆರು ಬಂದರುಗಳ ಅಭಿವೃದ್ಧಿ ವಿಷಯದಲ್ಲಿ ಎಷ್ಟು ಖರ್ಚಾಗುತ್ತದೆಂದು ನಾವು ಫರ್ಮ್‌ನವರನ್ನು ಕೇಳಿದ್ದೇವೆ. ಇಂಡೊ-ಪೋರ್ ಫರ್ಮಿನವರು ಒಂದು ಅಂದಾಜನ್ನು ತಿಳಿಸಿದ್ದಾರೆ. ಅದು 80 ಕೋಟಿ ರೂಪಾಯಿಗಳೆಂದು. ಕಾರವಾರ ಮತ್ತು ಕುಂದಾಪುರ ಏರಿಯಾನ ಬಂದರುಗಳ ಅಭಿವೃದ್ಧಿಗಾಗಿ ಇನ್ನೂ 40 ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಹೇಳಿದ್ದಾರೆ. ಒಟ್ಟಿನಲ್ಲಿ 120 ಕೋಟಿ ರೂಪಾಯಿಗಳು ರಫ್ ಎಕ್ಸ್‌ಪೆಂಡಿಚರ್ ಅಂದಾಜು ಎಂದು ಹೇಳಿದ್ದಾರೆ.

Smt. WINNIFRED F. FERNANDES.—In what way are you going to develop Coondapur port?

Sri H. C. LINGA REDDY.—We are thinking of developing it as Fishery-cum-Cargo harbour.

ಶ್ರೀ ಬಿ. ಎಂ. ಇದಿನಬ್ಬ.—ಈ ಆರು ಬಂದರುಗಳನ್ನು ಏಕಕಾಲದಲ್ಲಿ ಅಭಿವೃದ್ಧಿ ಮಾಡಲಾಗುವುದು ಎಂದು ಹೇಳಿರುವುದರಿಂದ, ಯಾವುದನ್ನು ಪ್ರಥಮವಾಗಿ ಈಗ ತೆಗೆದುಕೊಳ್ಳಲಾಗುವುದು?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಇಂಡೋ-ಪೋರ್ ಫರ್ಮ್‌ನವರು ಕೊಟ್ಟ ಟೆಕ್ನಿಕಲ್ ರಿಪೋರ್ಟ್‌ನಲ್ಲಿ 15 ವರ್ಷಗಳ ಕಾಲ ಫೇಸಿಂಗ್ ಆಗುತ್ತದೆಂದು ತಿಳಿಸಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ಎಲ್ಲಾ ಕಾರ್ಯಗಳು ಹಂತಹಂತವಾಗಿ ಕಡಿಮೆ ಖರ್ಚಿನಲ್ಲಿ ಆಗುತ್ತದೆಂದು ಹೇಳುವಾಗ ಟೆಕ್ನಿಕಲ್ ರಿಪೋರ್ಟ್ ಕಾರವಾರ ಬಂದರಿಗೆ ಸಂಬಂಧಪಟ್ಟ ಹಾಗೆ ನಿಧಾನವಾಗುವುದಕ್ಕೆ ಕಾರಣವೇನು? ಇದಕ್ಕೆ ಮೈಸೂರು ಸರ್ಕಾರದ ಆಲಸ್ಯ ಕಾರಣವೊ ಅಥವಾ ಮೈಸೂರಿನವರ ಪ್ರಭಾವ ಅವರ ಮೇರೆ ಬೀಳದೇ ಇರುವುದು ಕಾರಣವೋ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮೈಸೂರು ಸರ್ಕಾರದವರ ಆಲಸ್ಯಮನೋಭಾವ ಇದರಲ್ಲಿ ಏನೂ ಇಲ್ಲ. ಇದನ್ನು ಅಭಿವೃದ್ಧಿಪಡಿಸಬೇಕೆಂದು ಇಂಡೊ-ಪೋರ್ ಇಂಟರ್‌ನ್ಯಾಷನಲ್ ಪೋರ್ಟ್ಸ್ ಡೆವಲಪ್‌ಮೆಂಟ್ ಕಮಿಟಿ ಎರಡು ಕೋಟಿ ರೂಪಾಯಿಗಳ ಅಂದಾಜನ್ನು ತಯಾರುಮಾಡಿ ಇಂಡಿಯಾ ಸರ್ಕಾರಕ್ಕೆ ಕಳುಹಿಸಿದ್ದಾರೆ. ಆದರ ಮಾಡರ್ ಟೆನ್ಸನ್ನು ಕೃಷ್ಣರಾಜಸಾಗರ ರಿಸರ್ಚ್ ಇನ್‌ಸ್ಟಿಟ್ಯೂಷನ್ನಿನವರು ಮಾಡಿದಾಗ ಸ್ವಲ್ಪ ಹೆಚ್ಚು ಕಡಿಮೆ ಬಂದದ್ದರಿಂದ, ಇಂಡಿಯಾ ಸರ್ಕಾರದವರು ಪುನಃ ಪರಿಶೀಲನೆಮಾಡಬೇಕೆಂದು ಹೇಳಿದ್ದರಿಂದ ಇಂಡೋ-ಪೋರ್‌ನವರು ಅದನ್ನು ಪರಿಶೀಲನೆಮಾಡುತ್ತಿದ್ದಾರೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—(ಈ) ಪ್ರಶ್ನೆಗೆ ಉತ್ತರವಾಗಿ ಕೊನೆಯಲ್ಲಿ "ವೆಚ್ಚವೆಷ್ಟೆಂಬುದನ್ನ ಲೆಕ್ಕ ಹಾಕಬೇಕಾಗಿದೆ" ಎಂದು ಹೇಳಿದೆ. ಹಳೆಯ ಅಂಕ ಅಂಶಗಳನ್ನೇ ಪುನಃ ಕೊಡುತ್ತೀರಿ. ಹಾಗಾದರೆ ಈ ವರ್ಷ ಎಷ್ಟು ರೂಪಾಯಿಗಳನ್ನು ಈ ಬಂದರುಗಳ ಅಭಿವೃದ್ಧಿಗಾಗಿ ಖರ್ಚುಮಾಡಲು ವ್ಯವಸ್ಥೆಮಾಡಿದ್ದೀರಿ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಈ 4ನೇ ಪಂಚವಾರ್ಷಿಕ ಯೋಜನೆಯಲ್ಲಿ 855 ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕೆಂದು ತೀರ್ಮಾನಮಾಡಿಕೊಂಡಿದ್ದೇವೆ. 68-69ರಲ್ಲಿ 25 ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕೆಂದಿದ್ದೇವೆ. ಆದರೆ ಒಟ್ಟು ಖರ್ಚು ಎಷ್ಟು ಆಗುತ್ತದೋ ಗೊತ್ತಿಲ್ಲ. 67-68ರಲ್ಲಿ 28.9 ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕಾಗಿದ್ದುದರಲ್ಲಿ 21.486 ಲಕ್ಷ ರೂಪಾಯಿಗಳು ಖರ್ಚಾಗಿವೆ.

ಶ್ರೀ ಎಚ್. ಎನ್. ನಂಜೇಗೌಡ.—ಈ ಬಾರ್ಜರ್ ಡೀಲ್ ಯಾವ ಸ್ಟೇಜಿನಲ್ಲಿದೆ? ಇದರ ಬಗ್ಗೆ ಕರಡು ಅಗ್ರಿಮೆಂಟ್ ತಯಾರುಮಾಡಿ ಕೇಂದ್ರಸರ್ಕಾರಕ್ಕೆ ಕಳುಹಿಸಿದ್ದಾರೆಯೆ? ಒಂದುವೇಳೆ ಕಳುಹಿಸದೇ ಇದ್ದರೆ, ಅವರು ಅದನ್ನು ಕಳುಹಿಸುವುದಕ್ಕೆ ಎಷ್ಟು ಕಾಲ ಬೇಕಾಗುತ್ತದೆ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅವರು ಫೈನಲ್ಲಾಗಿ ಫೀಜಿಬಿಲಿಟಿ ರಿಪೋರ್ಟನ್ನು ಈ ತಿಂಗಳ ಅಖೈರಿನೊಳಗೆ ಕೊಡುತ್ತಾರೆ. ಅದು ಬಂದಕೂಡಲೇ, ಪ್ಲಾನ್ಸ್, ಮತ್ತು ಎಸ್ಟಿಮೇಟುಗಳ ಬಗ್ಗೆ ಇಂಡಿಯಾ ಸರ್ಕಾರದೊಡನೆ ವ್ಯವಹಾರಮಾಡಿ, ಹಣ ಪೋರೇಂಡ್ ಸರ್ಕಾರದಿಂದ ಹಾಗೂ ಇಂಡಿಯಾ ಸರ್ಕಾರದಿಂದ ಬಂದ ಮೇರೆ ಸರ್ಕಾರದವರು ಇದನ್ನು ಏಮರ್ಶೆಮಾಡಿ ತೀರ್ಮಾನ ಮಾಡಬೇಕಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಈ ಬಂದರುಗಳನ್ನು ಕಟ್ಟುವುದು ಕೇಂದ್ರಸರ್ಕಾರದ ವ್ಯವಹಾರದಲ್ಲಿದೆಯೇ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮೇಜರ್ ಬಂದರುಗಳನ್ನು ಕಟ್ಟತಕ್ಕಂಥಾದ್ದು ಕೇಂದ್ರ ಸರ್ಕಾರದ್ದು. ಮೈನರ್ ಪೋರ್ಟುಗಳನ್ನು ಕಟ್ಟತಕ್ಕದ್ದು ಸಂಸ್ಥಾನ ಸರ್ಕಾರದ್ದು. ಮೈನರ್ ಪೋರ್ಟುಗಳ ನಿರ್ಮಾಣಕ್ಕೆ ಕೇಂದ್ರ ಸರ್ಕಾರದವರ ಸಹಾಯ, ಮತ್ತು ಬೇರೆ ದೇಶಗಳವರ ಸಹಾಯ ಬೇಕಾಗುತ್ತದೆ.

Sri H. N. NANJE GOWDA.—May I know whether the State Government has received any report from the Yugoslav consultants?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಯುಗೋಸ್ಲಾವಿಯಾ ದೇಶದ ತಜ್ಞರು ಕೊಟ್ಟಿರತಕ್ಕ ಮೀನಿನ ಅಭಿವೃದ್ಧಿ ಬಂದರಿನ ವಿಷಯವನ್ನು ತತ್ವತಃ ಒಪ್ಪಿಕೊಂಡು ಅದರ ಫೀಜಿಬಿಲಿಟಿ ರಿಪೋರ್ಟಿನ ಆಧಾರದ ಮೇರೆ ಮೀನುಗಾರಿಕೆಯ ಅಭಿವೃದ್ಧಿ ಬಂದರಿನ ಪ್ಲಾನು ಮತ್ತು ಎಸ್ಟಿಮೇಟು, ಡಿಜೈನನ್ನು ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಸಂಸ್ಥಾನ ಸರ್ಕಾರದವರು ಕಳುಹಿಸಬೇಕೆಂದು ತಿಳಿಸಿದ್ದಾರೆ. ಆ ಪ್ರಕಾರ ಅದನ್ನು ತಯಾರಿಸುವುದಕ್ಕೆ ತಕ್ಕ ಸೂಚನೆಯನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು.—ಪ್ರಶ್ನೋತ್ತರ ಕಾಲ ಈಗ ಮುಗಿಯಿತು.

QUESTIONS FOR ANSWERS ON THE DAY

(but not taken up)

Report of Pay Commission

85. Sri T. R. SHAMANNA (Fort).—

Will the Minister for Finance, Planning and Youth Welfare be pleased to state :—

(*a*) whether the report of the Pay Commission appointed by the Government to examine the Pay structure of the Mysore Government employees finalised, if so, when it would be published ;

(*b*) whether the recently enhanced D. A. to the Government employees is being paid or settled in full ;

(*c*) if not the steps they propose to take to pay the withheld portion of the D.A. ;

(*d*) when a final decision in this behalf will be taken ?